ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೆರಡನೆಯ ಅಧಿವೇಶನ

ಸೋಮವಾರ, ದಿನಾಂಕ : 07 ನೇ ಡಿಸೆಂಬರ್, 2020

ಕಿಯೋನಿಕ್ಸ್ ಸಂಸ್ಥೆಯಲ್ಲಿನ ಸೇವೆಗಳ ಬಗ್ಗೆ

ಶ್ರೀ ಕಾಂತರಾಜ್(ಬಿಎಂಎಲ್)(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) -

29 (213) ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ದಮಶೀಲತೆ ಮತ್ತು ಜೀವನೋಪಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ -

(ಅ) ಕಿಯೋನಿಕ್ಸ್ (Keonics) ಸಂಸ್ಥೆಯನ್ನು ಯಾವಾಗ ಸ್ಥಾಪಿಸಲಾಯಿತು; ಈ ಸಂಸ್ಥೆಯ ಧ್ಯೇಯೋದ್ದೇಶಗಳೇನು; (ವಿವರವಾದ ಮಾಹಿತಿ ಒದಗಿಸುವುದು)

(ಆ) ಸದರಿ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ನೌಕರರೆಷ್ಟು; (ನೌಕರರ ಹೆಸರು, ಹುದ್ದೆಯ ಪದನಾಮ, ವಿದ್ಯಾರ್ಹತೆ, ವೇತನ ಶ್ರೇಣಿ ಹಾಗೂ ಪ್ರಸ್ತುತ ಇವರು ಮಾಸಿಕ ಪಡೆಯುತ್ತಿರುವ ವೇತನದ ಮಾಹಿತಿ ಒದಗಿಸುವುದು)

(ಇ) ಸದರಿ ಸಂಸ್ಥೆಯು ಕಾಮಗಾರಿ ಹಾಗೂ ಮಾನವ ಶಕ್ತಿ ಸೇವೆ ಪೂರೈಸಲು KTTP Act ಪ್ರಕಾರ 4ಜಿ ವಿನಾಯಿತಿ ಪಡೆಯಲಾಗಿದೆಯೇ; ಪಡೆದಿದ್ದರೆ ಯಾವ ಯಾವ ಕಾಮಗಾರಿ/ಸೇವೆಗಳಿಗೆ ಪಡೆಯಲಾಗಿದೆ; (ವಿವರವಾದ ಮಾಹಿತಿ ಒದಗಿಸುವುದು)

(ಈ) ಸದರಿ ಸಂಸ್ಥೆಯು ನೀಡುತ್ತಿರುವ ಸೇವೆಗಳು ಯಾವುವು; ಇವುಗಳಿಗೆ ಸಂಸ್ಥೆಯು ಪಡೆಯುತ್ತಿರುವ ಸೇವಾ ಶುಲ್ಕವೆಷ್ಟು; (ವಿವರವಾಗಿ ಸೇವಾವಾರು ಸಂಪೂರ್ಣ ಮಾಹಿತಿ ಒದಗಿಸುವುದು)

(ಉ) ಈ ಸಂಸ್ಥೆಯಲ್ಲಿ ಇಲ್ಲಿಯವರೆಗೆ ನೋಂದಾಯಿಸಿ (EMPLAMENT) ಕೊಂಡಿರುವ NGO/FIRM ಹಾಗೂ ಸಂಸ್ಥೆಗಳಾವುವು; ಇವುಗಳು ನೀಡುವ ಸೇವೆಗಳಿಗೆ ಸಂಸ್ಥೆ ನೀಡುವ ಸೇವಾ ಶುಲ್ಕವೆಷ್ಟು? (ವಿವರವಾದ ಮಾಹಿತಿ ಒದಗಿಸುವುದು)